ಕರ್ನಾಟಕ ವಿಧಾನ ಪರಿಷತ್ತು

141ನೇ ಅಧಿವೇಶನ -2020

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.	129
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ಸಚಿವರು	ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	21.09.2020

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಸಹಾಯಕ ಕುಲಸಚಿವರಿಂದ ಉಪ-ಕುಲಸಚಿವರು ಮತ್ತು ಇತರ ಹುದ್ದೆಗಳಿಗೆ ಪದೋನ್ನತಿ ನೀಡುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು; (ನಿಯಮಾವಳಿಗಳ ಮಾಹಿತಿ ಒದಗಿಸುವುದು)	ರಾಜ್ಯ ಸರ್ಕಾರದ ನೇಮಕಾತಿ ನಿಯಯಮಗಳು ಹಾಗೂ ಕಾರ್ಯನೀತಿಗೆ ಅನುಗುಣವಾಗಿ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳಲ್ಲಿನ ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 41 ರನ್ವಯ ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ವೃಂದ ಮತ್ತು ನೇಮಕಾತಿ ಪರಿನಿಯಮಗಳನ್ನು ರಚಿಸಿಕೊಳ್ಳಲಾಗುತ್ತದೆ. ವಿಶ್ವವಿದ್ಯಾಲಯಗಳ ಬೋಧಕ ಹುದ್ದೆಗಳ ನೇರ ನೇಮಕಾತಿ ಹಾಗೂ ಪದೋನ್ನತಿ ಮೂಲಕ ನೇಮಕಾತಿಗಳನ್ನು ವೃಂದ ಮತ್ತು ನೇಮಕಾತಿ ಪರಿನಿಯಮಗಳಲ್ಲಿ ಅವಕಾಶಗಳಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ-57 ರನ್ವಯ ಕೈಗೊಳ್ಳಲಾಗುತ್ತದೆ.
ಆ	ವಿಶ್ವವಿದ್ಯಾನಿಲಯಗಳಲ್ಲಿ ಪದೋನ್ನತಿ ನೀಡುವಲ್ಲಿ ನಿಯಮಾವಳಿ ಅನುಸರಿಸದಿರುವುದು, ನಿಯಮ ಉಲ್ಲಂಘನೆಯಂತಹ ಪ್ರಕರಣಗಳಿಂದ ಭ್ರಷ್ಟಾಚಾರ ಹೆಚ್ಚುತ್ತಿರುವ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುತ್ತಿದೆಯೇ; ಹಾಗಿದ್ದಲ್ಲಿ, ಇದುವರೆಗಿನ ಸರ್ಕಾರದ ಕ್ರಮಗಳೇನು; (ಮಾಹಿತಿ ಒದಗಿಸುವುದು)	ವಿಶ್ವವಿದ್ಯಾನಿಲಯಗಳಲ್ಲಿ ಬೋಧಕೇತರೆ ಹುದ್ದೆಗಳಿಗೆ ಪದೋನ್ನತಿ ನೀಡುವಲ್ಲಿ ನಿಯಮಾವಳಿಗಳನ್ನು ಅನಸರಿಸದಿರುವ ಹಾಗೂ ಭ್ರಷ್ಟಾಚಾರ ಎಸಗುವ ಉದ್ದೇಶದಿಂದ ವೃಂದ ಮತ್ತು ನೇಮಕಾತಿ ಪರಿನಿಯಮಗಳನ್ನು ವಿಶ್ವವಿದ್ಯಾಲಯಗಳಲ್ಲಿ ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೆ, ಬೆಂಗಳೂರು ವಿಶ್ವವಿದ್ಯಾನಿಲಯವು ಸಿಂಡಿಕೇಟ್ ಅನುಮೋದನೆ ಪಡೆದು ಸಹಾಯಕ ಕುಲಸಚಿವ ಹುದ್ದೆಯಿಂದ ಉಪ-ಕುಲಸಚಿವ ಪದೋನ್ನತಿ ನೀಡುವಲ್ಲಿ ಪರಿನಿಯಮಗಳ ಉಲ್ಲಂಘನೆಯಾಗಿರುವುದು ವರದಿಯಾಗಿರುತ್ತದೆ. ಪರಿನಿಯಮಗಳಲ್ಲಿನ ಉಪಬಂಧಗಳನ್ನು ಅರ್ಥೈಸಿಕೊಳ್ಳುವಲ್ಲಿ ಉಂಟಾಗುವ ಲೋಪಗಳಿಂದ ನೀಡಲಾಗುವ ಪದೋನ್ನತಿಗಳಲ್ಲಿನ ನಿಯಮಬಾಹಿರತೆಯನ್ನು ಸರಿಪಡಿಸಕೊಳ್ಳಲು ವಿಶ್ವವಿದ್ಯಾಲಯಗಳು ಸಕ್ಷಮ ಪ್ರಾಧಿಕಾರಗಳಾಗಿರುತ್ತವೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಅಥವಾ ಅದರಡಿಯ ಪರಿನಿಯಮಗಳು, ವಿನಿಯಮಗಳು, ಆಧ್ಯಾದೇಶಗಳ ಉಪಬಂಧಗಳಿಗೆ ಅಥವಾ ರಾಜ್ಯ ಸರ್ಕಾರದ ಕಾರ್ಯನೀತಿಗೆ ಅಸಂಗತವಾಗುವ ವಿಶ್ವವಿದ್ಯಾಲಯದ ಆದೇಶ/ಅಧಿಸೂಚನೆಗಳನ್ನು ರದ್ದುಪಡಿಸಲು ಸದರಿ ಅಧಿನಿಯಮದ ಪ್ರಕರಣ 10 ರಲ್ಲಿ ರಾಜ್ಯ ಸರ್ಕಾರಕ್ಕೆ ಅಧಿಕಾರ ಪ್ರದತ್ತವಾಗಿರುತ್ತದೆ.

ಇ	ಇತ್ತೀಚಿಗೆ ಬೆಂಗಳೂರು ವಿಶ್ವವಿದ್ಯಾನಿಲಯವು ಸಿಂಡಿಕೇಟ್ ಅನುಮೋದನೆ ಪಡೆದು ಸಹಾಯಕ ಕುಲಸಚಿವ ಹುದ್ದೆಯಿಂದ ಉಪ-ಕುಲಸಚಿವ ಪದೋನ್ನತಿ ನೀಡುವಲ್ಲಿ ನಿಯಮ ಉಲ್ಲಂಘನೆ, ವ್ಯಾಪಕ ಭ್ರಷ್ಟಾಚಾರ ಆಗಿರುವುದನ್ನು ಸರ್ಕಾರವು ಗಮನಿಸಿದೆಯೇ: ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು(ಮಾಹಿತಿ ಒದಗಿಸುವುದು)	ಬೆಂಗಳೂರು ವಿಶ್ವವಿದ್ಯಾನಿಲಯವು ಸಿಂಡಿಕೇಟ್ ಅನುಮೋದನೆ ಪಡೆದು ಸಹಾಯಕ ಕುಲಸಚಿವ ಹುದ್ದೆಯಿಂದ ಉಪ-ಕುಲಸಚಿವ ಪದೋನ್ನತಿ ನೀಡುವಲ್ಲಿ ಆಗಿರುವ ಪರಿನಿಯಮಗಳ ಉಲ್ಲಂಘನೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ, ನಿಗದಿತ ವಿದ್ಯಾರ್ಹತೆ ಇದ್ದರೂ ಸಹ, ಸಹಾಯಕ ಕುಲಸಚಿವರು ಹುದ್ದೆಯಲ್ಲಿ 5 ವರ್ಷಗಳ ಅರ್ಹತಾಯಕ ಸೇವೆಯನ್ನು ಪೂರೈಸದ ಆರು ಸಹಾಯಕ ಕುಲಸಚಿವರಿಗೆ ವೃಂದ ಮತ್ತು ನೇಮಕಾತಿ ಪರಿನಿಯಮಗಳಲ್ಲಿನ ಅವಕಾಶಗಳಿಗೆ ವ್ಯತಿರಿಕ್ತವಾಗಿ ಉಪ ಕುಲಸಚಿರು ಹುದ್ದೆಗಳಿಗೆ ಪದೋನ್ನತಿ ನೀಡಿ ಅಕ್ರಮ ಎಸಗಲಾಗಿರುವುದು ಸರ್ಕಾರವು ಗಮನಿಸಿರುತ್ತದೆ. ಈ ಅಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದ ತಕ್ಷಣವೇ, ನಿಯಮಬಾಹಿರ ಹಾಗೂ ಅಧಿಕಾರತೀತವಾಗಿ ಉಪಕುಲಸಚಿವರು ಹುದ್ದೆಗಳಿಗೆ ನೀಡಲಾಗಿರುವ ಪದೋನ್ನತಿಗಳು ಹಾಗೂ ಈ ಪದೋನ್ನತಿಗಳ ತತ್ಪರಿಣಾಮವಾಗಿ ಸಹಾಯಕ ಕುಲಸಚಿವರು ಹುದ್ದೆಗಳಿಗೆ ನೀಡಲಾಗಿರುವ ಪದೋನ್ನತಿಗಳನ್ನು ಕೂಡಲೇ ಹಿಂಪಡೆಯಲು ಹಾಗೂ ಈ ಕುರಿತಂತೆ ಒಂದು ವಾರದೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರದ ಅ.ಸ. ಪತ್ರ ಸಂಖ್ಯೆ:ಇಡಿ/87/ಯುಬಿವಿ/2020, ದಿ:18.06.2020ರಲ್ಲಿ ಕುಲಪತಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ, ನಿಯಮಬಾಹಿರ ಪದೋನ್ನತಿಗಳ ಪರಿಣಾಮದಿಂದ ಉಪ ಕುಲಸಚಿವರು, ಸಹಾಯಕ ಕುಲಸಚಿವರು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ವೇತನ ಪಾವತಿಸದಂತೆ ಹಣಕಾಸು ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಕುಲಪತಿಗಳಿಂದ ಅಪೇಕ್ಷಿತ ವರದಿ ಸ್ವೀಕೃತವಾಗದ ಕಾರಣ ಸರ್ಕಾರದ ಅ.ಸ. ಪತ್ರ ಸಂಖ್ಯೆ:ಇಡಿ/87/ಯುಬಿವಿ/2020, ದಿ:17.07.2020 ರಲ್ಲಿ ಈ ಕುರಿತು ಪುನ: ಜ್ಞಾಪಿಸಲಾಗಿತ್ತು. ತತ್ಪರಿಣಾಮವಾಗಿ, ಕುಲಪತಿಗಳು ಸಲ್ಲಿಸಿದ ವರದಿಯಲ್ಲಿ, ಅಭ್ಯರ್ಥಿಗಳ ಅಲಭ್ಯತೆ ಸಂದರ್ಭದಲ್ಲಿ ವೃಂದ ಮತ್ತು ನೇಮಕಾತಿ ಪರಿನಿಯಮಗಳಲ್ಲಿ ನಿಗದಿಪಡಿಸಿದ ಅರ್ಹತೆಯನ್ನು ಸಡಿಸಲು ಪರಿನಿಯಮಗಳಲ್ಲಿ ಅವಕಾಶವಿರುವ ಹಾಗೂ "ಅರ್ಹತೆ" ಎಂಬುದು ಅರ್ಹತಾದಯಕ ಸೇವೆಯನ್ನು ಒಳಗೊಳ್ಳುವುದಾಗಿ ಹಲವು ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರತಿಪಾದಿಸಿರುವ ಮೇರೆಗೆ, ವಿಶ್ವವಿದ್ಯಾಲಯದ ಕಾನೂನು ಸಮಾಲೋಚಕರ ಅಭಿಪ್ರಾಯ ಪಡೆದು ಪದೋನ್ನತಿಗಳನ್ನು ನೀಡಲಾಗಿರುವ ಸಮರ್ಥಿಸಿಕೊಳ್ಳಲಾಗಿದೆ. ಆದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು **K K Parmar v. High Court of Gujarat (2006) 5 SCC 789** ರ ಪ್ರಕರಣದಲ್ಲಿ ಪ್ರತಿಪಾದಿಸಲಾಗಿರುವ ನ್ಯಾಯಿಕ ತತ್ವಾಂಶದನ್ವಯ ಮೆರಿಟ್ ಕೇವಲ ಶೈಕ್ಷಣಿಕ ಅರ್ಹತೆಯಾಗಿರದೇ ವಿವಿಧ ಗುಣಗಳ ಸಮ್ಮಿಶ್ರಣವಾಗಿದ್ದು, ಮೆರಿಟ್‌ನ್ನು ನಿರ್ಣಯಿಸಲು ಹಿಂದಿನ ಸೇವೆ/ಕಾರ್ಯ ನಿರ್ವಹಣೆ ಒಂದು ಪ್ರಮುಖ ಮಾನದಂಡವಾಗಿರುತ್ತದೆ..

		ಆದುದರಿಂದ, ಉಪ-ಕುಲಸಚಿವರ ಹುದ್ದೆಯ ಪದೋನ್ನತಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳನ್ವಯ ಪೋಷಕ ವೃಂದದಲ್ಲಿ ಸಲ್ಲಿಸಬೇಕಾದ ಕನಿಷ್ಠ ಅರ್ಹತಾದಾಯಕ ಸೇವಾವಧಿಯನ್ನು ಸಡಿಸಲು ಅವಕಾಶವಿದೆಯೇ ಎಂಬ ಬಗ್ಗೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಶ್ನಿತ ಪದೋನ್ನತಿಗಳ ಕ್ರಮಬದ್ಧತೆಯ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸೇವಾ ನಿಯಮಗಳು ಶಾಖೆಯ ಅಭಿಪ್ರಾಯ ಪಡೆಯಲಾಗುತ್ತಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಸ್ವೀಕೃತವಾಗುವ ಅಭಿಪ್ರಾಯವು ಒಂದು ವೇಳೆ ಅಗತ್ಯಪಡಿಸಿದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಶ್ನಿತ ಪದೋನ್ನತಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 10 ರನ್ವಯ ರದ್ದುಪಡಿಸಲು ಅವಕಾಶವಿರುತ್ತದೆ
ಈ	ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ಅಕ್ರಮ ಪದೋನ್ನತಿ ವಿಷಯವಾಗಿ ಮಹಾಲೇಖಪಾಲರು ಸಹ ಲೆಕ್ಕಪರಿಶೋಧನಾ ಸಮಯದಲ್ಲಿ ನಮೂದಿರುವ ಅಂಶವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಈ ಅಕ್ರಮದಲ್ಲಿ ಭಾಗಿಯಾಗಿರುವವರ ವಿರುದ್ಧ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)	ನಿಯಮಬಾಹಿರ ಹಾಗೂ ಅಧಿಕಾರತೀತವಾಗಿ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಸಚಿವರು ಹುದ್ದೆಗಳಿಗೆ ಪದೋನ್ನತಿಗಳು ನೀಡಲಾಗಿರುವ ಬಗ್ಗೆ ಮಹಾಲೇಖಪಾಲರ ವರದಿಯಲ್ಲಿ ಆಕ್ಷೇಪಿಸಲಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರವು, ನಿಯಮಬಾಹಿರ ಪದೋನ್ನತಿಗಳ ಪರಿಣಾಮದಿಂದ ಉಪ ಕುಲಸಚಿವರು ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ವೇತನ ಪಾವತಿಸದಂತೆ ಹಣಕಾಸು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದ್ದು, ತದನುಸಾರ ವೇತನ ಪಾವತಿಯನ್ನು ತಡೆಹಿಡಿಯಲಾಗಿದೆ. ಸಿಂಡಿಕೇಟ್‌ನ ಅನುಮೋದನೆಯೊಂದಿಗೆ ನಿಯಮಬಾಹಿರ ಪದೋನ್ನತಿಗಳನ್ನು ಪರಿನಿಯಮಗಳಲ್ಲಿನ ಉಪಬಂಧಗಳನ್ನು ಅರ್ಥೈಸಿಕೊಳ್ಳುವಲ್ಲಿ ಉಂಟಾಗಿರುವ ವಿಫಲತೆಯಿಂದಾಗಿ ನೀಡಿರುವುದು ಕಂಡುಬಂದಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಸ್ವೀಕೃತವಾಗುವ ಅಭಿಪ್ರಾಯವು ಒಂದು ವೇಳೆ ಅಗತ್ಯಪಡಿಸಿದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಶ್ನಿತ ಪದೋನ್ನತಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 10 ರನ್ವಯ ರದ್ದುಪಡಿಸಲು ಅವಕಾಶವಿರುತ್ತದೆ.

ಇಡಿ/160/ಯುಬಿವಿ/2020

(ಡಾ॥ ಅಶ್ವಥ್‌ನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)